ಒ ಎಸ್ ನಂ:**52/2021**

**ಪಿಡಬ್ಲ್ಯೂ**: 1

ಪ್ರಮಾಣ ವಚನ ಭೋದಿಸಿದ ದಿನಾಂಕ:**18.02.2026**

ಪಾಟೀ ಸವಾಲು: **ಶ್ರೀಯುತ** ಬಿ ಎನ್ ಪಿ **ವಕೀಲರಿಂದ:** ಪ್ರತಿವಾದಿ ಪರ :

ನಾನು ಪ್ರಸ್ತುತ ನನ್ನ ವಾಕ್ಯಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸವಿರುತ್ತೇನೆ. 2 ನೇ ವಾದಿ ಪ್ರಸ್ತುತ ವಾದಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸ ಇಲ್ಲ. ಅವರು ಬೆಂಗಳೂರಿನಲ್ಲಿ ವಾಸ ಇರುತ್ತಾರೆ. ಪ್ರತಿವಾದಿ ರವಿಕಿರಣ್ ಶೆಟ್ಟಿರವರು ವಾದಪತ್ರದಲ್ಲಿ ನಮೂದಿಸಿರುವ ಸ್ವತ್ತುಗಳ ಪೈಕಿ ಇರುವ ಮನೆಯಲ್ಲಿ ವಾಸವಿರುತ್ತಾರೆ. ಪ್ರತಿವಾದಿ ನನ್ನ ತಮ್ಮ.

2. ದಾವಾ ದಾಖಲು ಮಾಡುವ ಕಾಲಕ್ಕೆ ನನ್ನ ಮತ್ತು ನನ್ನ ತಮ್ಮ ರವಿಕಿರಣ್ ಶೆಟ್ಟಿಯವರ ವಯಸ್ಸು ಎಷ್ಟು ಎಂದು ನಮೂದು ಮಾಡಿದ್ದೇವೆಂದು ಈಗ ನೆನಪಿಲ್ಲ.

3. ದಾವೆ ದಾಖಲು ಮಾಡಲು ಅನುಭವ ಕೊಟ್ಟವರು ದಾವೆ ದಾಖಲು ಮಾಡಲು ಅನುಭವವನ್ನು ಕೊಟ್ಟವರು ನಾನು ಮತ್ತು ನನ್ನ ತಂಗಿ. ನಾನು ಸಲ್ಲಿಸಿರುವ ವಾಕ್ಯ ಪ್ರ. ಪತ್ರದಲ್ಲಿ ಏನು ನಮೂದಿದೆ ಎಂದು ಈಗ ನೆನಪಿಲ್ಲ. ಈ ವ್ಯವಹರಣೆಯಲ್ಲಿ ನನ್ನ ತಂಗಿಯ ಪರವಾಗಿ ಕೂಡಾ ನಾನೇ ಸಾಕ್ಷ್ಯ ಹೇಳುತ್ತಿದ್ದೇನೆ.

4. ನನ್ನ ಮಗಳು ಸುರತ್ಕಲ್ ನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದ ಕಾರಣ ಆಕೆಯ ವಿದ್ಯಾಭ್ಯಾಸದ ಸಲುವಾಗಿ ನಾನು ಸುರತ್ಕಲ್ ನಲ್ಲಿ ಮನೆಯನ್ನು ಬಾಡಿಗೆಗೆ ಪಡೆದಿದ್ದೆ. 2015 ಅಥವಾ 2016 ರಲ್ಲಿ ನಾನು ಮನೆ ಬಾಡಿಗೆ ಪಡೆದಿದ್ದೇನೆ. ನಾವು ಸುರತ್ಕಲ್ಗೆ ಬರುವ ಪೂರ್ವ ಪೂನದಲ್ಲಿ ವಾಸ ಇದ್ದೆವು. ನನ್ನ ಮಗಳು ನಾಸಿಕ್, ಪೂನಾ ಮತ್ತು ಮುಂಬೈನಲ್ಲಿ ವಿದ್ಯಾಭ್ಯಾಸ ಮಾಡಿದ್ದು ಎಂಬಿಬಿಎಸ್ ಮಾಡುವ ಸಲುವಾಗಿ ಸುರತ್ಕಲ್ ಗೆ ಬಂದಿರುತ್ತಾರೆ. ಅದಕ್ಕೂ ಪೂರ್ವ ದ.ಕ. ಜಿಲ್ಲೆಯಲ್ಲಿ ಆಕೆ ವಿದ್ಯಾಭ್ಯಾಸ ಮಾಡಿಲ್ಲ.

**5.** ನನ್ನ ಗಂಡ ಸುರತ್ಕಲ್ ಗೆ ಬರುವ ಪೂರ್ವ ನಾಸಿಕ್, ಬಾಂಬೆ ಹಾಗೂ ಪೂನಾದಲ್ಲಿ ಇರುವ ವಿಜಯ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ನಾಸಿಕ್ ನಲ್ಲಿ ನನ್ನ ಗಂಡನಿಗೆ ಸ್ವಂತ ಮನೆ ಇಲ್ಲ. ಈಗ ನನಗೆ ತೋರಿಸಿದ ಭಾವಚಿತ್ರದ ಪ್ರತಿಯಲ್ಲಿ ನಾನು ಮತ್ತು ನನ್ನ ಗಂಡ ಕುಳಿತಿರುವುದು ಕಂಡುಬರುತ್ತದೆ ಮತ್ತು ನನ್ನ ಮಗಳು ದೀಪ ಹಚ್ಚುತ್ತಿರುವುದು ಕಂಡುಬರುತ್ತದೆ. ಸದರಿ ಭಾವಚಿತ್ರದ ಪ್ರತಿಯುನ್ನ ಸಾಕ್ಷಿ ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಪಿ-**1** ಎಂದು ಗುರುತಿಸಲಾಯಿತು.

**6.** ಬೆದ್ರಾಡಿಯ ವಿಳಾಸದಲ್ಲಿ ನನ್ನ ಆಧಾರ್ ಕಾರ್ಡ್ ಇರುವ ಸಂಬಂಧಿತ ದಾಖಲೆಯನ್ನು ಹಾಜರುಪಡಿಸಬಲ್ಲೆ. ನಾಸಿಕ್ ನಲ್ಲಿ ನಾನು ಯಾವ ಕಡೆಯಿಂದ ಬಾಡಿಗೆಗೆ ಪಡೆದಿದ್ದೆವು ಎನ್ನುವ ಬೆಗ್ಗ ನನಗೆ ಗೊತ್ತಿಲ್ಲ.

**7.** ನನ್ನ ತಂಗಿ ರೂಪಾರಾಣಿರವರು ಮೂಡಬಿದಿರೆಗೆ ಬರುವ ಮೊದಲು ಗುಜರಾತ್ ನಲ್ಲಿ ಇದ್ದರು. ಅವರ ಗಂಡ ಗುಜರಾತ್ ನಲ್ಲಿ ಇಂಜಿನಿಯರ್ ಕೆಲಸ ಮಾಡುತ್ತಿದ್ದರು. ಅವರಿಗೆ ಒಬ್ಬ ಮಗ. ಅವರು ಗುಜರಾತಿನಲ್ಲಿ ಎಷ್ಟು ವರ್ಷ ಇದ್ದರು ಎಂದು ನನಗೆ ನೆನಪಿಲ್ಲ. ನನ್ನ ತಂಗಿಯ ಗಂಡ ಮೃತರಾದ ನಂತರ ಅವರ ಮಗನ ವಿದ್ಯಾಭ್ಯಾಸಕ್ಕಾಗಿ ಮೂಡಬಿದ್ರೆಗೆ ಬಂದು ವಾಸ ಇರುತ್ತಾರೆ. ನಾನು ಸುರತ್ಕಲ್ಗೆ ಮತ್ತು ನನ್ನ ತಂಗಿ ಮೂಡಬಿದಿರೆಗೆ ಬರುವ ಪೂರ್ವ ನನ್ನ ತಂಗಿ ಗುಜರಾತಿನಲ್ಲಿ ಹಾಗು ನನ್ನ ಗಂಡನ ಜೊತೆ ನಾಸಿಕ್, ಪೂನಾ ಹಾಗೂ ಬಾಂಬೆಯಲ್ಲಿ ಇದ್ದೆವು.

**8.** ದಿ.**03.11.2006** ರಲ್ಲಿ ನಾನು ಮತ್ತು ನನ್ನ ತಂಗಿ ರೂಪಾರಾಣಿಯವರು ನನ್ನ ತಾಯಿಯ ಹೆಸರಿಗೆ ಪವರ್ ಆಫ್ ಅಟಾರ್ನಿ ಬರೆದುಕೊಟ್ಟಿದ್ದೆವು ಎಂದರೆ ಸರಿ.

**9.** ಸದರಿ ಪವರ್ ಆಫ್ ಅಟಾರ್ನಿ ಯಲ್ಲಿ "ಸದರಿ ಆಸ್ತಿಗಳಿಂದ ದೂರದಲ್ಲ್ ವಾಸ್ತವ್ಯ ಇರುವುದರಿಂದ ನಮ್ಮ ಜೊತೆ ಹಕ್ಕಿನ ಆಸ್ತಿಗಳನ್ನು ಅಬಿವೃದ್ಧಿಪಡಿಸುವುದಕ್ಕೆ ಮತ್ತು ಉಸ್ತುವಾರಿ ರಕ್ಷಾವಲೆಯನ್ನು ನೋಡಿಕೆಂಡು ಬರಲಿಕ್ಕೆ ಅನುಕೂಲವಾಗಲು" ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ನಾವು

ದೂರದಲ್ಲಿದ್ದೆವು ಆದರೆ ನನ್ನ ಅಮ್ಮನಿಗೆ ಸೌಖ್ಯವಿಲ್ಲದಿದ್ದಾಗ ಹಾಗೂ ರಜೆಯ ಕಾಲದಲ್ಲಿ ನಾವು ಬೆದ್ರಾಡಿಗೆ  ಬರುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ಅಮ್ಮನಿಗೆ ಪವರ್ ಆಫ್ ಅಟಾರ್ನಿ ಯನ್ನು ಎಲ್ಲಾ ವಿಚಾರಗಳಿಗು ಕೊಟ್ಟಿಲ್ಲ. ನಾನು ರಜೆಯಲ್ಲಿ ಹಾಗು ಆಗಾಗ್ಗ ಬೆದ್ರಾಡಿಗೆ ಬರುತ್ತಿದ್ದೆವು ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

**10.** ನನ್ನ ತಮ್ಮ ಪ್ರತಿವಾದಿ ಪುತ್ತೂರಿನಲ್ಲಿ ಕಲಿತಿದ್ದಾರೆ.  ನನ್ನ ತಮ್ಮ ಕಾಲೇಜಿಗೆ ಹೋಗುವಾಗ ಸರ್ವೆ ಗ್ರಾಮದಲ್ಲಿನ ನನ್ನ ತಂದೆಯ ಮನೆಯಿಂದ ನಮ್ಮ ಜೊತೆ ಬರುತ್ತಿದ್ದರು.  ನಂತರ ಕಾಲೇಜು ಮುಗಿದ ನಂತರ ಬೆದ್ರಾಡಿ ಮನೆಯಲ್ಲಿ ವಾಸವಿದ್ದಾರೆ.  ನನ್ನ ತಂದೆ **1997** ರಲ್ಲಿ ಮೃತರಾಗಿದ್ದಾರೆ. ನನ್ನ ತಾಯಿ ಮೂರನೆ ಅಥವಾ **4** ನೇ ಫಾರಂ ಓದಿರಬಹುದು.  ಆಗಿನ ಕಾಲದಲ್ಲಿ ನನ್ನ ತಾಯಿ ಒಳ್ಳೆಯ ವಿದ್ಯಾಭ್ಯಾಸ ಮಾಡಿರಬಹುದು.  ನನ್ನ ತಾಯಿ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ನನ್ನ ತಾಯಿಗೆ ಕನ್ನಡ ಭಾಷೆ ಚೆನ್ನಾಗಿ ಬರುತ್ತಿದ್ದು ಇಂಗ್ಲೀಷ್ ಭಾಷೆ ಅಲ್ಪ ಸ್ವಲ್ಪ ಬರುತ್ತಿತ್ತು.  **2020** ರಲ್ಲಿ ಆಸ್ಪತ್ರೆಗೆ ಸೇರುವಾಗ ನನ್ನ ಅಮ್ಮ ಯಾವ ಖಾಯಿಲೆಯಿಂದ ಬಳಲುತ್ತಿದ್ದರು ಎಂದು ನನಗೆ ಹೇಳಿಲ್ಲ.  **2020** ರಲ್ಲಿ ನನ್ನ ತಾಯಿಯನ್ನು ಆಸ್ಪತ್ರೆಗೆ ನನ್ನ ತಮ್ಮ ಪ್ರತಿವಾದಿ ಸೇರಿಸಿದ್ದಾರೆ ಎಂದರೆ ನಾನು ಕೂಡಾ ಜೊತೆಗೆ ಇದ್ದೆ ಎಂದು ನುಡಿಯುತ್ತಾರೆ.  ಆಸ್ಪತ್ರೆಗೆ ನಾನು ನನ್ನ ತಾಯಿಯನ್ನು ಸೇರಿಸಿದ ಸಂಬಂಧಿ ಆಸ್ಪತ್ರೆಯ ದಾಖಲೆಗಳಲ್ಲಿ ನನ್ನ ಹೆಸರು ಇಲ್ಲ.  ನನ್ನ ತಂಗಿ **2** ನೇ ಪ್ರತಿವಾದಿಯ ಹೆಸರು ಕೂಡಾ ಆಸ್ಪತ್ರೆಯ ದಾಖಲೆಗಳಲ್ಲಿ ಇಲ್ಲ ಕಾರಣ ಎಲ್ಲರ ಹೆಸರುಗಳನ್ನು ಆಸ್ಪತ್ರೆಯ ದಾಖಲೆಗಳಲ್ಲಿ ನಮೂದಿಸುವುದಿಲ್ಲ ಎಂದು ನುಡಿಯುತಶ್ತಾರೆ.

**11.** ನನ್ನ ತಮ್ಮ ಪ್ರತಿವಾದಿ ಮದುವೆಯಾದಾಗ **38** ಅಥವಾ **39** ವಯಸ್ಸಾಗಿರಬಹುದು.  **2004** ರಲ್ಲಿ ಅವರು ಮದುವೆಯಾದರು. ನನಗೆ **1994** ರಲ್ಲಿ ಮತ್ತು ನನ್ನ ತಂಗಿಗೆ **1997** ರಲ್ಲಿ ಮದುವೆಯಾಗಿರುತ್ತದೆ.  ನನ್ನ ತಮ್ಮ ತಡವಾಗಿ ಮದುವೆಯಾಗಲು ಕಾರಣವನ್ನು ಅವನನ್ನೇ ಕೇಳಬೇಕು.  ನನ್ನ ತಾಯಿಯ ಜೊತೆಗೆ

ನನ್ನ ತಮ್ಮ ವಿವಾಹದ ಪೂರ್ವ ಆಸ್ತಿಯ ಜವಾಬ್ದಾರಿಯನ್ನು ಮತ್ತು ನನ್ನ ತಾಯಿಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದ ಕಾರಣ ಅವರು ತಡವಾಗಿ ವಿವಾಹವಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಯವರ ಜೊತೆ ಆಸ್ತಿಯ ರಕ್ಷಾವಲೆಯನ್ನು ನನ್ನ ತಮ್ಮ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಹೌದು ಅವರ ಜೂತೆ ನಾವು ಕೂಡಾ ಆಸ್ತಿಯ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ.

**12.** ಆಸ್ತಿಯ ರಕ್ಷಾವಲೆಯನ್ನು ನಾನು ಮದುವೆ ಆಗುವ ಪೂರ್ವದಿಂದಲು ಕುಟುಂಬದವರ ಜೊತೆ ನೋಡಿಕೊಂಡು ಮದುವೆಯಾದ ನಂತರವೂ ಕೂಡಾ ನೋಡಿಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಈ ಕೇಸು ದಾಖಲು ಮಾಡಮ ಪೂರ್ವದವರೆಗೂ ಕೂಡಾ ನಾವು ನನ್ನ ತಮ್ಮ ಹಾಗೂ ತಾಯಿಯೊಂದಿಗೆ ದಾವಾ ಸೊತ್ತಿನ ರಕ್ಷಾವಲೆಯನ್ನು ಮಾಡಿರುತ್ತೇವೆ.

**13.** ನನ್ನ ತಾಯಿಯ ಹೆಸರಿಗೆ ಬರೆದುಕೊಟ್ಟ ದಿ.**3-11-2006** ರ ಜಿ ಪಿ ಎ ಯನ್ನು ನನ್ನ ತಾಯಿ ಬದುಕಿದ್ದ ಕಾಲದಲ್ಲಿ ರದ್ದುಪಡಿಸಿಲ್ಲ.

**14.** ರವೀಂದ್ರನಾಥ ರೈ ನನ್ನ ತಾಯಿಯ ತಮ್ಮ. ನಮ್ಮ ಸೊತ್ತಿಗೆ ಲಗತ್ತಾಗಿ ರವೀಂದ್ರನಾಥ ರೈ ರವರಿಗೆ **3** ಎಕರೆ ಜಮೀನು ಇದ್ದ ಬಗ್ಗೆ ಗೊತ್ತಾ ಎಂದರೆ ಸಾಕ್ಷಿಯು ಜಾಗ ಇರುವುದು ಗೊತ್ತು ಅದಕ್ಕೆ ದಾವಾ ಸೊತ್ತು ಲಗತ್ತಾಗಿರುವ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರವೀಂದ್ರನಾಥ ರೈ ರವರು ಪ್ರಸ್ತುತ ಇದ್ದಾರೆ. ಅವರು ಈಗ ಬೆಂಗಳೂರಿನಲ್ಲಿ ವಾಸವಿದ್ದಾರೆ. ಅವರ ಆಸ್ತಿಯನ್ನು ರಕ್ಷಾವಲೆ ಮಾಡುವ ಸಲುವಾಗಿ ರವೀಂದ್ರನಾಥ ರೈ ರವರು ನನ್ನ ತಾಯಿಯ ಹೆಸರಿಗೆ ಜಿ ಪಿ ಎ ಮಾಡಿಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ರವೀಂದ್ರನಾಥ ರೈ ರವರ ಆಸ್ತಿಯನ್ನು ಜಿ ಪಿ ಎ ಮಾಡಿಕೊಟ್ಟ ಆಧಾರದಲ್ಲಿ ನನ್ನ ತಮ್ಮನ ಹೆಸರಿಗೆ ನನ್ನ ತಾಯಿ ದಾನಪತ್ರದ **(**ದಿ.**6.3.2020)** ಮೂಲಕ ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ದಿ.**6.3.2020** ರಂದು ವ್ಯವಸ್ಥಾ ಪತ್ರದ ಮೂಲಕ ಆಸ್ತಿ

ನನ್ನ ತಮ್ಮನಿಗೆ ನನ್ನ ತಾಯಿಯ ಮುಖಾಂತರ ಹೋಗಿರುವುದು ಆರ್ ಟಿ ಸಿ ನೋಡಿದಾಗ ಗೊತ್ತಾಗಿದೆ.

ಈ ಹಂತದಲ್ಲಿ ಸಾಕ್ಷಿಯ **ಮುಂದುವರಿದ ಪಾಟೀಸವಾಲಿಗೆ ಮಾನ್ಯ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಗಿದೆ.**

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು